ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು-೬೫

ತುರುವೇಕೆರೆ ಹೋಬಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **31.12.2013**

ಈ ವಾರದ ಮುನ್ಸೂಚನೆ (ದಿನಾಂಕ **01-01-14 to 05.01.14** ವರೆಗೆ)

ನಿಯತಾಂಕಗಳು	01.01.14	02.01.14	03.01.14	04.01.14	05.01.14
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	28	28	28	29	29
ಕನಿಷ್ಠ ಉಷ್ಣಾಂಶ (ಡಿ.ಸೆ.)	13	13	14	13	14
ಮೋಡ (ಪ್ರಮಾಣ)	2	1	2	2	2
ಆರ್ದ್ರತೆ ೭.೨೦ ಬೆ (ಶೇ)	74	73	74	75	76
ಆರ್ದ್ರತೆ ೨.೨೦ ಮ (ಶೇ)	42	38	32	37	44
ಗಾಳಿಯ ವೇಗ (ಕಿ.ಮಿ/ಗಂಟೆಗೆ)	5	6	4	5	6
ಗಾಳಿಯ ದಿಕ್ಕು (ಡಿಗ್ರಿ)	110	110	100	90	80

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಮಳೆ ಸಂಪೂರ್ಣ ಕ್ಷೀಣಿಸಿದ್ದು, ಒಣಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶ 28.0-29.0^{o}C ಮತ್ತು ಕನಿಷ್ಠ 13.0-14.0 ^{o}C ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 73-76 % ಇದ್ದು, ಮಧ್ಯಾಹ್ನ 32-44 % ಇರುವುದು ಮತ್ತು ಗಾಳಿಯು ನೈರುತ್ಯ ಧಿಕ್ಕಿನಿಂದ ಗಂಟೆಗೆ ಸರಾಸರಿ 4-6 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಒಣಹವೆ ಮುಂದುವರೆಯಲಿದ್ದು, ಕಟಾವಿಗೆ ಬಂದಿರುವ ನೆಲೆಗಡಲೆ ಮತ್ತು ಮೆಕ್ಕೆಜೋಳ ಹಾಗೂ ರಾಗಿಯನ್ನು ಕಟಾವು ಮಾಡಿ ಒಣಗಿಸಲು ಸೂಚಿಸಲಾಗಿದೆ.
- ಕಟಾವು ಮಾಡಿದ ಬೆಳೆಯನ್ನು ಒಕ್ಕಣೆ ಮಾಡಿ ಶೇಖರಿಸಲು ಸೂಚಿಸಲಾಗಿದೆ.
- ತೊಗರಿಯಲ್ಲಿ ಕಾಯಿ ಕೊರೆಯುವ ಹುಳು ಕಂಡುಬಂದಲ್ಲಿ ಲ್ಯಾನೇಟ್ (ಮಿಥೊಮಿಲ್) (1 ಗ್ರಾಂ ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ. ಇದಲ್ಲದೇ, ಫ್ಲ್ಲಾಶ್ ಅಥವಾ ಎಕಾಲಕ್ಸ್ (2 ಮಿ.ಲೀ. ಪ್ರತಿ ಲೀ. ನೀರಿಗೆ ಬೆರೆಸಿ) ಸಿಂಪಡಿಸಲು ಸೂಚಿಸಲಾಗಿದೆ.
- ಹೂ ಕೋಸು ಹಾಗೂ ಎಲೆ ಕೋಸುವಿನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್): ಇವುಗಳನ್ನು ಹತೋಟಿ ಮಾಡಲು ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫ಼ಾಸ್ ಅನ್ನು 2.5 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.
- ದನಕರುಗಳಿಗೆ ಕಾಲುಬಾಯಿ ರೋಗ ಕಂಡುಬಂದಿರುವುದರಿಂದ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.